b) The Group-II Issues deals with availability of water- Surface flows, additional/alternative resources.

The yield as per Cauvery Fact Finding Committee (CFFC) can not be relied and it is much more than 800 tmc. It is to be re-assessed. The Groundwater available in delta region is also to be taken into consideration.

c) Group-III Issues deals with Equitable apportionment and related subjects.

Karnataka has started its arguments and the same is in progress.

ಈ) ನ್ಯಾಯಾಧೀಕರಣವು ಅಂತಿಮ ತೀರ್ಪನ್ನು ಆಗಸ್ಟ್ 2006ರ ವೇಳಗೆ ನೀಡುವ ಸಂಭವವಿದೆ.

4337 (4150) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :– ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೀಮಾ ಏತ ನೀರಾವರಿ ಯೋಜನೆ ಹಾಲಿ ಯಾವ ಹಂತದಲ್ಲಿದೆ;

ಆ) ರಾಜ್ಯ ಸರ್ಕಾರ ಯೋಜನೆಯ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಯಾವಾಗ ಕಳುಹಿಸಲಾಗಿದೆ;

ಇ) ಕೇಂದ್ರ ಸರ್ಕಾರ ಪ್ರಸ್ತಾವನೆಗೆ ಅನುಮೋದನೆ ನೀಡಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು;

ಈ) ಕೇಂದ್ರ ಸರ್ಕಾರ ಪ್ರಸ್ತಾವನೆಯನ್ನು ವಾಪಸ್ ಕಳುಹಿಸಿದೆಯೇ; ಹಾಗಿದ್ದಲ್ಲಿ ಕಾರಣಗಳೇನು;

ಉ) ಸದರಿ ಯೋಜನೆಗೆ ಅನುಮೋದನೆ ಪಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ) ಭೀಮಾ ಏತ ನೀರಾವರಿ ಯೋಜನೆಯ ಎಡ ಮತ್ತು ಬಲದಂಡೆಯ ಮಣ್ಣಿನ ಏರಿಯ ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿವೆ. ಮಧ್ಯದ ಕಾಂಕ್ರೀಟ್ ಕೋಡಿಯ ಕಾಮಗಾರಿ ಪ್ರಗತಿಯಲ್ಲಿದೆ. ಗೇಟುಗಳನ್ನು ಅಳವಡಿಸಲು ಗುತ್ತಿಗೆದಾರರನ್ನು ನೇಮಿಸಲಾಗಿದೆ. ಎರಡು ಲಿಫ್ಟ್ ಕೆಲಸಗಳ ಟೆಂಡರ್ ಅನುಮೋದನೆಯಾಗಿತ್ತು. ಕಾಮಗಾರಿಗಳನ್ನು ಪ್ರಾರಂಭಿಸಲಾಗುತ್ತಿದೆ. ಕಾಲುವೆ ಜಾಲದ ಸರ್ವೆ ಕಾರ್ಯವು ಪ್ರಗತಿಯಲ್ಲಿದೆ.

ಆ) ಈ ಯೋಜನೆಯ ಯೋಜನಾ ವರದಿಯನ್ನು ರಾಜ್ಯ ಸರ್ಕಾರದ ಪತ್ರ ಸಂ:ಪಿಡಬ್ಲ್ಯೂಡಿ 164 ಜಿಪಿಐ 77 ದಿನಾಂಕ : 24-11-77 ರಲ್ಲಿ ಅನುಮೋದನೆಗಾಗಿ ಕೇಂದ್ರಕ್ಕೆ ಸಲ್ಲಿಸಲಾಗಿತ್ತು ಮುಂದೆ, ಸದರಿ ಯೋಜನೆಗೆ ರಾಜ್ಯ ಸರ್ಕಾರವು ದಿನಾಂಕ : 18-04-92 ರಂದು ರೂ.94.17 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು, ರೂ.107.70 ಕೋಟಿಗಳಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಲಾಗಿರುತ್ತದೆ. ತರುವಾಯ ಸದರಿ ಪ್ರಸ್ತಾವನೆಯನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಿ, ಈ ಯೋಜನೆಯ ಕೆಲವು ಅಂಶಗಳಿಗೆ ಕೇಂದ್ರ ಜಲ ಆಯೋಗದಿಂದ ಅನುಮೋದನೆ ದೊರೆತಿದ್ದು, ಮುಂದೆ ಕೇಂದ್ರ ಸರ್ಕಾರದ ಯೋಜನಾ ಆಯೋಗದಿಂದ ತೀರುವಳಿಯನ್ನು ಪಡೆಯಲು ಎಲ್ಲಾ ಕ್ರಮವನ್ನು ಕೈಗೊಳ್ಳಲಾಗಿದೆ.

ಇ) ಸದರಿ ಯೋಜನೆಯ ಕೆಲವು ಅಂಶಗಳಾದ ಅಂದರೆ 1. ವ್ಯವಸಾಯ (Agricultural Aspect), 2. ಪರಿಸರ ತೀರುವಳಿ (Environmental Clearance) ಹಾಗೂ 3. ಗರಿಷ್ಠ ಪ್ರವಾಹದ ಪ್ರಮಾಣ (Maximum Flood Discharge) ಅಂಶಗಳಿಗೆ ಕೇಂದ್ರ ಜಲ ಆಯೋಗದ ಅನುಮೋದನೆಯನ್ನು ಈಗಾಗಲೇ ನೀಡಲಾಗಿರುತ್ತದೆ ಹಾಗೂ ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಇಲಾಖೆಯ ತಾಂತ್ರಿಕ ನಿಪುಣರ ಸಮಿತಿಯು ಭೀಮಾ ಏತ ನೀರಾವರಿ ಯೋಜನೆಗೆ ಪರಿಸರ ಇಲಾಖೆಯಿಂದ ಅನುಮತಿ ನೀಡಲು ಶಿಫಾರಸ್ಸು ಮಾಡಿದ್ದು ಅಂತಿಮ ತೀರುವಳಿಯನ್ನು

ನಿರೀಕ್ಷಿಸಲಾಗಿದೆ. ಕೇಂದ್ರ ಸರ್ಕಾರದ ಯೋಜನಾ ಆಯೋಗದಿಂದ ಅಂತಿಮ ತೀರುವಳಿಯನ್ನು ಪಡೆಯಬೇಕಾಗಿರುತ್ತದೆ. ಕೃಷ್ಣಾ ಕಣಿವೆಯಲ್ಲಿ ಕರ್ನಾಟಕದ ಪಾಲಿನ ನೀರಿನ ಸದ್ಬಳಕೆಗೆ ಈ ಯೋಜನೆಯನ್ನು ತೀವ್ರಗತಿಯಲ್ಲಿ ಅನುಷ್ಠಾನಗೊಳಿಸಬೇಕಾಗಿದ್ದು, ಸದರಿ ಯೋಜನೆಗೆ ಕೇಂದ್ರ ಜಲ ಆಯೋಗದಿಂದ ಅಂತಿಮ ತೀರುವಳಿಯನ್ನು ಪಡೆಯಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು.

ಈ) ಭೀಮಾ ಏತ ನೀರಾವರಿ ಯೋಜನೆಯ ನೀರಾವರಿ ಯೋಜನಾ ಅಂಶಕ್ಕೆ (Irrigation Planning Aspect) ಕೇಂದ್ರ ಜಲ ಆಯೋಗವು ಕೆಲವು ಹೆಚ್ಚಿನ ವಿವರ / ಮಾಹಿತಿಗಳನ್ನು ಕೋರಿದ್ದು, ಮಾಹಿತಿಗಳನ್ನು ದಿನಾಂಕ : 8.6.05 ರಂದು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿದ್ದು, ಈ ಅಂಶಕ್ಕೆ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ. ಯೋಜನೆಯ ಬೇರೆ ಯಾವುದೇ ಪ್ರಸ್ತಾವನೆಗಳು ಕೇಂದ್ರ ಸರ್ಕಾರದಿಂದ ವಾಪಸ್ಸು ಬಂದಿರುವುದಿಲ್ಲ.

ಉ) ಭೀಮಾ ಏತ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಪ್ರಮುಖ ಅಂಶಗಳಾದ ನೀರಿನ ಲಭ್ಯತೆ, ಪರಿಸರ ತೀರುವಳಿ, ಗರಿಷ್ಟ ಪ್ರವಾಹದ ಪ್ರಮಾಣ ಹಾಗೂ ವ್ಯವಸಾಯ ಅಂಶಗಳಿಗೆ ಇತ್ತೀಚೆಗಷ್ಟೆ ಕೇಂದ್ರದಿಂದ ಅನುಮೋದನೆಯನ್ನು ಪಡೆಯಲಾಗಿರುತ್ತದೆ ಹಾಗೂ ನೀರಾವರಿ ಯೋಜನಾ ಅಂಶಕ್ಕೆ (Irrigation Planning Aspect) ಕೇಂದ್ರ ಜಲ ಆಯೋಗವು ಕೆಲವು ಹೆಚ್ಚಿನ ವಿವರ/ಮಾಹಿತಿಗಳನ್ನು ಕೋರಿದ್ದು, ಮಾಹಿತಿಗಳನ್ನು ದಿನಾಂಕ : 8.6.05ರಂದು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿದ್ದು, ಈ ಅಂಶಕ್ಕೆ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ. ಉಳಿದ ಕೆಲವು ಅಂಶಗಳಾದ ಗೇಟ್ ಅಂಶ, ಅಡಿಪಾಯದ ಅಂಶ, ಭೂಜಲದ ಅಂಶ, ನೀರು ನಿರ್ವಹಣೆ ಹಾಗೂ ಕಾಡಾ ಅಂಶ, ಕೋಡಿ ಮತ್ತು ಕಾಲುವೆ ವಿನ್ಯಾಸದ ಅಂಶ ಹಾಗೂ ಯೋಜನೆಯ ಆರ್ಥಿಕ ಅಂಶಕ್ಕೆ ಅನುಮೋದನೆಯನ್ನು ಪಡೆಯಬೇಕಾಗಿದ್ದು, ಈ ಅಂಶಗಳು ಕೇಂದ್ರದಿಂದ ಇತ್ತೀಚೆಗಷ್ಟೆ ಅನುಮೋದಿಸಲ್ಪಟ್ಟಿರುವ ಗರಿಷ್ಟ ಪ್ರವಾಹದ ಪ್ರಮಾಣ ಹಾಗೂ ಅನುಮೋದನೆಯ ಹಂತದಲ್ಲಿರುವ ನೀರಾವರಿ ಯೋಜನಾ ಅಂಶದ ತಿರುವಳಿಯ ಮೇಲೆ ಅವಲಂಬಿಸಿದ್ದು, ಇವುಗಳಿಗೂ ಸಹ ಕೇಂದ್ರ ಜಲ

ಆಯೋಗದ ವಿವಿಧ ನಿರ್ದೇಶನಾಲಯದಿಂದ ಹಂತಹಂತವಾಗಿ ಅನುಮೋದನೆ ಪಡೆಯಬೇಕಾಗಿರುವುದರಂತೆ, ಈ ದಿಸೆಯಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು. ಸದರಿ ಯೋಜನೆಗೆ ಕೇಂದ್ರ ಜಲ ಆಯೋಗದಿಂದ ಅಂತಿಮ ತೀರುವಳಿಯನ್ನು ಪಡೆಯಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು.

4338 (4151) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡದಲ್ಲಿ ರಂಗಾಯಣ ಸಂಸ್ಥೆಯ ಶಾಖೆ ಆರಂಭಕ್ಕೆ ಸರಕಾರ ಅನುಮತಿ ನೀಡಿದ್ದು ಯಾವಾಗ;

ಆ) ರಂಗಾಯಣ ಆರಂಭಕ್ಕೆ ಸರ್ಕಾರ ಇದುವರೆಗೂ ಬಿಡುಗಡೆ ಮಾಡಿರುವ ಹಣ ಎಷ್ಟು; ಉಳಿದ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು;

ಇ) ರಂಗಾಯಣ ಆರಂಭಗೊಳ್ಳಲು ತಡವಾಗುತ್ತಿರುವುದಕ್ಕೆ ಕಾರಣಗಳೇನು;

ಈ) ಸರ್ಕಾರ ತಕ್ಷಣ ಧಾರವಾಡದಲ್ಲಿ ರಂಗಾಯಣ ಸಂಸ್ಥೆ ಆರಂಭಿಸಲು ಯಾವ ಕ್ರಮಗಳನ್ನು ಕೈಗೊಳ್ಳಲಿದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ದಿನಾಂಕ : 02.09.2003 ರಂದು ಧಾರವಾಡದಲ್ಲಿ ರಂಗಾಯಣ ಸಂಸ್ಥೆಯ ಶಾಖೆ ಆರಂಭಕ್ಕೆ ಅನುಮತಿ ನೀಡಿದೆ.

ಆ) ಧಾರವಾಡದಲ್ಲಿ ರಂಗಾಯಣ ಶಾಖೆಯನ್ನು ಆರಂಭಿಸಲು 28 ಕುಂಟೆ ಪ್ರದೇಶವನ್ನು ರಂಗಾಯಣಕ್ಕೆ ನೀಡಲು 2003ರಲ್ಲಿ ತೀರ್ಮಾನಿಸಲಾಗಿರುತ್ತದೆ. ಧಾರವಾಡದ ರಂಗಾಯಣ ಶಾಖೆಯ ಕಚೇರಿಯೆನ್ನು ಒಳಗೊಂಡಂತೆ ಸುವರ್ಣ ಸಾಂಸ್ಕೃತಿಕ ಸಮುಚ್ಚಯವನ್ನು ನಿರ್ಮಾಣ ಮಾಡುವ ಕಾರ್ಯಕ್ರಮವನ್ನು ಪ್ರಸ್ತುತ ಕೈಗೊಂಡಿದ್ದು, ಈ ಉದ್ದೇಶಕ್ಕಾಗಿ ಧಾರವಾಡದ ಜಿಲ್ಲಾಧಿಕಾರಿಗಳಿಗೆ 2004ರಲ್ಲಿ ರೂ.10.00 ಲಕ್ಷಗಳನ್ನು ನೀಡಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಸುವರ್ಣ ಸಾಂಸ್ಕೃತಿಕ ಸಮುಚ್ಚಯ ನಿರ್ಮಾಣಕ್ಕಾಗಿ ಸುವರ್ಣ ಕರ್ನಾಟಕ ಯೋಜನೆಯಡಿ